


بسم اللهِ الرّحمٰن الرّحيم

# ಮಸೀಹ್ ಮೌಊದ್ ದಿನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **21–03–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ನಾಳಿದ್ದು ಮಾರ್ಚ್ 23. ಅಹ್ಮದೀಯ ಜಮಾಅತಿನ ಇತಿಹಾಸದಲ್ಲಿ ಮಾರ್ಚ್ 23ರ ದಿನವು ಬಹಳ ಮಹತ್ವದ್ದಾಗಿದೆ, ಏಕೆಂದರೆ ಮಾರ್ಚ್ 23, 1889ರಂದು ಬೈಅತಿನ ಆರಂಭದೊಂದಿಗೆ ಹಝ್ರತ್ ಮಸೀಹ್ ಮೌಊದ್(ಅ) ಜಮಾಅತಿನ ಅಡಿಪಾಯವನ್ನು ಹಾಕಿದರು. ಅವರ ಆಗಮನವು ಅಲ್ಲಾಹನ ವಾಗ್ದಾನದ ಪ್ರಕಾರ ಮತ್ತು ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಗಳ ಪ್ರಕಾರವಾಗಿತ್ತು. ಆ ಸಮಯದಲ್ಲಿ ಇಸ್ಲಾಮಿನ ಸ್ಥಿತಿಯು ಬಹಳ ಹೀನಾಯವಾಗಿತ್ತು. ಈಗಲೂ ಧಾರ್ಮಿಕ, ರಾಜಕೀಯ ಮತ್ತು ಲೌಕಿಕ ದೃಷ್ಟಿಯಿಂದ ಇಸ್ಲಾಮಿನ ಅವಸ್ಥೆ ಶೋಚನೀಯವಾಗಿದೆ. ಅನೇಕ ಮುಸ್ಲಿಂ ರಾಷ್ಟ್ರಗಳು ತೈಲ ಸಂಪತ್ತಿನಿಂದ ಸಮೃದ್ಧವಾಗಿದ್ದರೂ ಅವುಗಳ ಪ್ರಾಮುಖ್ಯತೆ ಮತ್ತು ಘನತೆ ಕೊನೆಗೊಂಡಿದೆ. ಆದರೆ ಹಝ್ರತ್ ಮಸೀಹ್ ಮೌಊದ್(ಅ) ಬೈಅತ್ ಪಡೆದುಕೊಂಡ ಸಮಯದಲ್ಲಿ ಮುಸ್ಲಿಮರ ಸ್ಥಿತಿಯನ್ನು ನೋಡಿ ಅವರು ಬಹಳ ದುಃಖಿತರಾಗಿದ್ದರು. ಇಸ್ಲಾಮಿನ ಮೇಲೆ ವಿಶೇಷವಾಗಿ ಕ್ರೈಸ್ತ ಧರ್ಮದಿಂದ ನಿರಂತರ ದಾಳಿಗಳು ನಡೆಯುತ್ತಿದ್ದವು. ಅವುಗಳಿಗೆ ಉತ್ತರ ನೀಡಲು ಯಾರೂ ಇರಲಿಲ್ಲ. ಮುಸ್ಲಿಂ ಉಲೇಮಾಗಳು ಸಹ ಭಯಭೀತರಾಗಿದ್ದರು. ಲಕ್ಷಾಂತರ ಮುಸ್ಲಿಮರು ಕ್ರೈಸ್ತ ಧರ್ಮದ ಮಡಿಲಿಗೆ ಬೀಳುತ್ತಿದ್ದರು.

ಮುಸ್ಲಿಮರ ಸ್ಥಿತಿ ಆ ರೀತಿ ಇದ್ದಾಗ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಮಾತ್ರ ಅಲ್ಲಾಹನ ಆದೇಶದ ಪ್ರಕಾರ ಎದ್ದು ನಿಂತರು ಮತ್ತು ಇಸ್ಲಾಮಿನ ರಕ್ಷಣೆಗಾಗಿ ಅಲ್ಲಾಹನ ಪಹಿಲ್ವಾನನ ಪಾತ್ರವನ್ನು ವಹಿಸಿಕೊಂಡರು. ಆ ಸಮಯದಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲ ಧರ್ಮಗಳು, ಇಸ್ಲಾಮಿನ ಮತ್ತು ಇಸ್ಲಾಮಿನ ಸ್ಥಾಪಕರಾದ ಹಝ್ರತ್ ಪೈಗಂಬರ್(ಸ)ರ ಮೇಲೆ ಭಾಷಣಗಳು ಮತ್ತು ಬರಹಗಳ ಮೂಲಕ ತೀವ್ರ ದಾಳಿಗಳನ್ನು ನಡೆಸುತ್ತಿದ್ದಾಗ ಅವುಗಳಿಗೆ ಹಝ್ರತ್ ಮಸೀಹ್ ಮೌಊದ್(ಅ) ಉತ್ತರಿಸಿದರು. ಬೈಅತ್ ತೆಗೆದುಕೊಳ್ಳುವುದಕ್ಕೆ ಮೊದಲೇ ಅವರು ಈ ನೋವಿನಿಂದ **ಬರಾಹೀನೆ ಅಹ್ಮದಿಯಾ** ಎಂಬ ಹೆಸರಿನ ಒಂದು ಗ್ರಂಥವನ್ನು ಬರೆದರು. ಅದರಲ್ಲಿ ಅವರು ಶತ್ರುಗಳ, ಇಸ್ಲಾಮಿನ ವಿರೋಧಿಗಳ ದಾಳಿಗಳಿಗೆ ಸೂಕ್ತವಾದ ಉತ್ತರವನ್ನು ನೀಡಿದರು. ಪವಿತ್ರ ಖುರ್‌ಆನ್ ಅಲ್ಲಾಹನ ವಚನವೆಂದೂ, ಅದ್ವಿತೀಯ ಗ್ರಂಥವೆಂದೂ ಮತ್ತು ಹಝ್ರತ್ ಪೈಗಂಬರ್(ಸ) ಸತ್ಯವಂತ, ಪ್ರಾಮಾಣಿಕ ಮತ್ತು ಕೊನೆಯ ಪ್ರವಾದಿ ಎಂಬುದಕ್ಕೆ ಖಂಡಿಸಲಾಗದ ಮತ್ತು ನಿರಾಕರಿಸಲಾಗದ ಪುರಾವೆಗಳನ್ನು ಅದರಲ್ಲಿ ಅವರು ನೀಡಿದರು. ಈ ಪುರಾವೆಗಳನ್ನು ನಿರಾಕರಿಸುವವರಿಗೆ ಸವಾಲು ಹಾಕಿದರು. ಇದರ ಮೂರನೇ ಅಥವಾ ನಾಲ್ಕನೇ ಅಥವಾ ಐದನೇ ಭಾಗವನ್ನಾದರೂ ಖಂಡಿಸಿದರೆ ಹತ್ತು ಸಾವಿರ ರೂಪಾಯಿ ಬಹುಮಾನ ನೀಡುತ್ತೇನೆ ಎಂದು ಹೇಳಿದರು, ಅದು ಆ ಸಮಯದಲ್ಲಿ ಬಹಳ ದೊಡ್ಡ ಬಹುಮಾನವಾಗಿತ್ತು. ಇಸ್ಲಾಂ ಸಹ ಒಂದು ಬಲವಾದ ಧರ್ಮವಾಗಿದೆ ಎಂಬ ಧೈರ್ಯ ಆಗ ಮುಸ್ಲಿಮರಿಗೆ ಬಂತು. ಉಲೇಮಾಗಳು ಬಹಳ ಪ್ರಶಂಸಿಸಿದರು.

ಇಸ್ಲಾಮಿನ ಈ ಸೇವೆಯಿಂದಾಗಿ ನಮ್ಮಿಂದ ಬೈಅತ್ ತೆಗೆದುಕೊಳ್ಳಬೇಕೆಂದು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಜನರು ಹೇಳಿದರು. ಆದರೆ ಅವರಿಗೆ ಆ ಸಮಯದಲ್ಲಿ ಬೈಅತ್ ಪಡೆಯಲು ಆದೇಶಿಸಲಾಗಿರಲಿಲ್ಲ, ಆದೇಶ ಬಂದಾಗ ಬೈಅತ್ ಪಡೆದುಕೊಂಡರು. ಅನಂತರ ಅಲ್ಲಾಹನು ಅವರೊಡನೆ ಮಸೀಹ್ ಮೌಊದ್ ಮತ್ತು ಮಹ್‌ದಿ ಮೌಊದ್ ಎಂದು ಘೋಷಿಸಬೇಕೆಂದು ಹೇಳಿದನು. ಬೈಅತ್ ಪಡೆಯಲಿಕ್ಕಾಗಿ ಅವರು ಡಿಸೆಂಬರ್ 1888ರಲ್ಲಿ ತಬ್ಲೀಗ್ ಎಂಬ ಹೆಸರಿನಲ್ಲಿ ಪ್ರಕಟಣೆಯನ್ನು ಹೊರಡಿಸಿದರು. ಅದರಲ್ಲಿ ಈ ದಿವ್ಯವಾಣಿಯನ್ನು ಸಹ ನಮೂದಿಸಲಾಗಿತ್ತು: "ನೀನು ನಿರ್ಧಾರ ಮಾಡಿದರೆ ಅಲ್ಲಾಹನ ಮೇಲೆ ಭರವಸೆ ಇಡು ಮತ್ತು ಈ ಹಡಗನ್ನು ನಮ್ಮ ಕಣ್ಣುಗಳ ಮುಂದೆ ಮತ್ತು ನಮ್ಮ ದಿವ್ಯವಾಣಿಯ ಪ್ರಕಾರ ನಿರ್ಮಿಸು. ನಿನ್ನಿಂದ ಬೈಅತ್ ತೆಗೆದುಕೊಳ್ಳುವವರು ನಿನ್ನಿಂದಲ್ಲ, ಅಲ್ಲಾಹನಿಂದ ಬೈಅತ್ ತೆಗೆದುಕೊಳ್ಳುತ್ತಾರೆ."

ಅನಂತರ ಅಲ್ಲಾಹನು ದೃಷ್ಟಾಂತಗಳನ್ನು ಸಹ ತೋರಿಸಿದನು. ಅವುಗಳಲ್ಲಿ ಸೂರ್ಯಗ್ರಹಣ ಮತ್ತು ಚಂದ್ರಗ್ರಹಣದ ಆಕಾಶೀಯ ದೃಷ್ಟಾಂತವು ವಿಶೇಷವಾಗಿತ್ತು. ಇದು ನನ್ನ ಮಹ್‌ದಿಯ ಆಗಮನದ ವಿಶೇಷ ದೃಷ್ಟಾಂತವಾಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದಾರೆ. ಅದು ನಿಗದಿತ ದಿನಾಂಕಗಳಲ್ಲಿ ಸಂಭವಿಸಬೇಕಿತ್ತು. ಅದು 1894ರಲ್ಲಿ ಪೂರ್ವದಲ್ಲಿ ಮತ್ತು 1895ರಲ್ಲಿ ಪಶ್ಚಿಮದಲ್ಲಿ ಸಂಭವಿಸಿತು.

ಹುಝೂರ್ ಹೇಳಿದರು: ಈ ರಮಝಾನ್‌ನಲ್ಲಿಯೂ ಚಂದ್ರಗ್ರಹಣ ಮತ್ತು ಸೂರ್ಯಗ್ರಹಣ ಸಂಭವಿಸಲಿವೆ ಮತ್ತು ಅದೇ ದಿನಾಂಕಗಳಲ್ಲಿ ಸಂಭವಿಸಲಿಕ್ಕಿದೆ. ಇದು ಇನ್ನು ಮುಂದೆಯೂ ಸಂಭವಿಸಬಹುದು. ಆದರೆ ಹಝ್ರತ್

ಮಸೀಹ್ ಮೌಊದ್(ಅ)ರ ಕಾಲದಲ್ಲಿ ಮತ್ತು ಅವರ ವಾದದ ನಂತರ ಸಂಭವಿಸಿದ ಚಂದ್ರ ಮತ್ತು ಸೂರ್ಯಗ್ರಹಣಗಳಿಗೆ ಅವುಗಳದೇ ಆದ ಮಹತ್ವವಿದೆ. ಅವರು ಅಲ್ಲಾಹನಿಂದ ಒಂದು ದೃಷ್ಟಾಂತವನ್ನು ಕೇಳಿದರು ಮತ್ತು ಅಲ್ಲಾಹನು ಅದನ್ನು ತೋರಿಸಿದನು. ಕೆಲವು ಅಹ್ಮದಿಯರು ಈ ದಿನಗಳಲ್ಲಿ ಸಂಭವಿಸುತ್ತಿರುವ ಗ್ರಹಣವನ್ನು ದೃಷ್ಟಾಂತವೆಂದು ಹೇಳುತ್ತಿದ್ದಾರೆ, ಇದರ ಬಗ್ಗೆ ಅಲ್ಲಾಹನೇ ಬಲ್ಲನು, ಹೇಗಿದ್ದರೂ, ದೃಷ್ಟಾಂತವೆಂದು ಭಾವಿಸುವುದಾದರೆ, ಇದು ಹಿಂದಿನ ವಾದದ ಒಂದು ಸರಪಳಿಯಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಜನವರಿ 12, 1889ರಂದು "**ತಕ್ಮೀಲ್ ತಬ್ಲೀಗ್**" ಎಂಬ ಹೆಸರಿನಲ್ಲಿ ಒಂದು ಪ್ರಕಟಣೆಯನ್ನು ಹೊರಡಿಸಿದರು. ಅದರಲ್ಲಿ ಹತ್ತು ಬೈಅತ್ ಶರತ್ತುಗಳನ್ನು ಇರಿಸಿದರು. ಅಹ್ಮದಿಯಾಗಲು ಈ ಹತ್ತು ಶರತ್ತುಗಳನ್ನು ಪಾಲಿಸುವುದು ಮತ್ತು ಅವುಗಳನ್ನು ಸಂಪೂರ್ಣವಾಗಿ ಸ್ವೀಕರಿಸುವುದು ಅವಶ್ಯಕ ಎಂದು ನಮಗೆ ಗೊತ್ತಿದೆ.

(ಹುಝೂರ್ ಆ ಶರತ್ತುಗಳ ಸಾರಾಂಶವನ್ನು ಪ್ರಸ್ತಾಪಿಸಿದ ನಂತರ ಹೀಗೆ ಹೇಳಿದರು:) ಈ ಶರತ್ತುಗಳ ಪ್ರಕಾರ ಅನೇಕ ನಿಷ್ಠಾವಂತರು ಬೈಅತ್ ಮಾಡಿದರು ಮತ್ತು ಇಂದಿನವರೆಗೂ ಅದೇ ಶರತ್ತುಗಳ ಪ್ರಕಾರ ಬೈಅತ್ ಮಾಡುತ್ತಿದ್ದಾರೆ. ನಾವು ಅದನ್ನು ಪಾಲಿಸುತ್ತಿದ್ದೇವೆಯೇ ಎಂದು ನಾವು ಯೋಚಿಸಬೇಕು. ಬೈಅತ್ ಮಾಡಿಕೊಂಡು ತಮ್ಮ ಜೀವ, ಸಂಪತ್ತು, ಸಮಯ ಮತ್ತು ಗೌರವವನ್ನು ತ್ಯಾಗ ಮಾಡಲು, ಧರ್ಮದ ಘನತೆಯನ್ನು ಕಾಪಾಡಲು ಮತ್ತು ಲೋಕದಲ್ಲಿ ಇಸ್ಲಾಮಿನ ಸಂದೇಶವನ್ನು ತಲುಪಿಸಲು ತಮ್ಮ ಕೈಲಾದಷ್ಟು ಪ್ರಯತ್ನಿಸಲು ಸಿದ್ಧರಿರುವ ಅನೇಕ ನಿಷ್ಠಾವಂತರು ಜಮಾಅತಿನಲ್ಲಿದ್ದಾರೆ.

ಹಝ್ರತ್ ಮಸೀಹ್ ಮೌಊದ್(ಅ)ರ ಹೃದಯದಲ್ಲಿ ಹಝ್ರತ್ ಪೈಗಂಬರ್(ಸ)ರೊಡನೆ ಇದ್ದ ಪ್ರೀತಿಯ ಸ್ಥಿತಿಯನ್ನು ಅವರ ಒಂದು ಉಲ್ಲೇಖದಿಂದ ಗೊತ್ತುಮಾಡಬಹುದಾಗಿದೆ. ಅವರು ಹೇಳುತ್ತಾರೆ: "ನಾನು ಯಾವಾಗಲೂ ಆಶ್ಚರ್ಯಚಕಿತನಾಗಿ ನೋಡುತ್ತಿದ್ದೇನೆ. ಈ ಅರಬಿ ಪ್ರವಾದಿ, ಅವರ ಹೆಸರು ಮುಹಮ್ಮದ್(ಸ). ಸಾವಿರ ಸಾವಿರ ಇಷ್ಟಾಶೀರ್ವಾದಗಳೂ ಶಾಂತಿಯೂ ಅವರ ಮೇಲೆ ಸುರಿಯಲ್ಪಡಲಿ, ಎಂತಹ ಉನ್ನತ ಅಂತಸ್ತನ್ನು ಪಡೆದ ಪ್ರವಾದಿಯಾಗಿರುವರು! ಅವರ ಉನ್ನತಸ್ಥಾನದ ಕೊನೆ ಎಲ್ಲಿದೆಯೆಂದು ತಿಳಿಯಲು ಸಾಧ್ಯವಿಲ್ಲ. ಅವರ ಪವಿತ್ರ ಪ್ರಭಾವದ ಅಂದಾಜು ಮಾಡುವುದು ಕೂಡ ಮನುಷ್ಯನಿಂದ ಸಾಧ್ಯವಾಗುವ ಕೆಲಸವಲ್ಲ. ಅವರ ಸ್ಥಾನಮಾನಗಳನ್ನು ಗುರುತಿಸಬೇಕಾದ ರೀತಿಯಲ್ಲಿ ಗುರುತಿಸಲಾಗಿಲ್ಲ ಎಂಬುದು ದುಃಖಕರವಾದ ಸಂಗತಿಯಾಗಿದೆ. ಲೋಕದಿಂದ ಕಣ್ಮರೆಯಾಗಿದ್ದ ತೌಹೀದನ್ನು ಮರಳಿ ತಂದ ಒಬ್ಬನೇ ಒಬ್ಬ ಪಹಿಲ್ವಾನ್ ಅವರೇ ಆಗಿದ್ದಾರೆ. ಅವರು ದೇವನೊಂದಿಗೆ ಅತ್ಯಂತ ಉನ್ನತ ಮಟ್ಟದ ಪ್ರೀತಿಯನ್ನು ಹೊಂದಿದ್ದರು. ಮಾನವರ ಸಹಾನುಭೂತಿಯಲ್ಲಿ ಅತ್ಯುನ್ನತ ಮಟ್ಟವನ್ನು ತಲುಪಿ ಅವರ ಜೀವ ಕರಗಿತು. ಆದ್ದರಿಂದ ಅವರ ಹೃದಯದ ರಹಸ್ಯ ತಿಳಿದಿದ್ದ ದೇವನು ಅವರಿಗೆ ಎಲ್ಲ ಪ್ರವಾದಿಗಳ ಮೇಲೆಯೂ, ಅವರ ಹಿಂದಿನ ಮತ್ತು ಅನಂತರದ ಎಲ್ಲರ ಮೇಲೆಯೂ ಅವನು ಶ್ರೇಷ್ಠತೆಯನ್ನು ಅನುಗ್ರಹಿಸಿದನು. ಅವರ ಅಭಿಲಾಷೆಗಳನ್ನು ಅವರ ಜೀವಿತದಲ್ಲಿಯೇ ಅವನು ಈಡೇರಿಸಿಕೊಟ್ಟನು. ಅವರು ಎಲ್ಲ ಅನುಗ್ರಹಗಳ ಮೂಲವಾಗಿದ್ದಾರೆ. ಅವರ ಅನುಗ್ರಹವನ್ನು ಒಪ್ಪಿಕೊಳ್ಳದೆ ಯಾವುದೇ ಶ್ರೇಷ್ಠತೆಯನ್ನು ಹೇಳಿಕೊಳ್ಳುವವನು, (ಹಝ್ರತ್ ಪೈಗಂಬರ್(ಸ)ರ ಅನುಗ್ರಹವಿಲ್ಲದೆ ಯಾವುದಾದರೂ ಶ್ರೇಷ್ಠತೆ ಲಭಿಸಿದ್ದಾಗಿ ಹೇಳಿಕೊಳ್ಳುವವನು) ಮನುಷ್ಯನಲ್ಲ, ಬದಲಾಗಿ ಶೈತಾನನ ಸಂತತಿ. ಏಕೆಂದರೆ ಪ್ರತಿಯೊಂದು ಶ್ರೇಷ್ಠತೆಯ ಕೀಲಿಗೈ ಅವರಿಗೆ ನೀಡಲ್ಪಟ್ಟಿದೆ."

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರೊಂದಿಗೆ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಇದ್ದ ಪ್ರೀತಿಯ ಕಾರಣದಿಂದಾಗಿ ಅಲ್ಲಾಹನು ಅವರನ್ನು ಮಸೀಹ್ ಮೌಊದ್(ಅ) ಆಗಿ ಕಳುಹಿಸಿದನು. ಅಲ್ಲಾಹನು ಅವರೊಡನೆ ಹೇಳಿದನು: ಈ ಪ್ರೀತಿಯ ಕಾರಣದಿಂದ ನಾನು ನಿನಗೆ ಈ ಸ್ಥಾನವನ್ನು ನೀಡುತ್ತಿದ್ದೇನೆ. ಆದ್ದರಿಂದ ನೀನು ಮಸೀಹ್ ಮೌಊದ್ ಮತ್ತು ಮಹ್ದಿ ಮೌಊದ್ ಆಗಿದ್ದೇನೆ ಎಂದು ಘೋಷಿಸು. ಇಸ್ಲಾಮಿನ ಪುನರುತ್ಥಾನದ ವಾಗ್ದಾನವನ್ನು ನಾನು ಪೂರೈಸುತ್ತೇನೆ ಮತ್ತು ಈ ಕಾರ್ಯವನ್ನು ನಿನಗೆ ಒಪ್ಪಿಸುತ್ತೇನೆ.

ಅವರು ಆ ಕಾರ್ಯಗಳನ್ನು ಚೆನ್ನಾಗಿ ನಿರ್ವಹಿಸಿದರು. ಅನಂತರ ಅವರು ಜಮಾಅತಿನವರೊಡನೆ ಮಸೀಹ್ ಮೌಊದ್‌ರೊಂದಿಗೆ ಸಹಾಬಿಯರಂತಹ ಜನರು ಇರುತ್ತಾರೆ ಎಂದು ಹೇಳಿದರು. ಇದು ಅಲ್ಲಾಹನ ಮಾತಾಗಿದೆ. ನಾವು ಹಝ್ರತ್ ಪೈಗಂಬರ್(ಸ)ರ ಹೆಸರನ್ನು ಪ್ರಕಾಶಮಾನಗೊಳಿಸುತ್ತೇವೆ ಮತ್ತು ಇಸ್ಲಾಮಿನ ಹೆಸರನ್ನು ಪ್ರಕಾಶಮಾನಗೊಳಿಸುತ್ತೇವೆ ಮತ್ತು ಇಸ್ಲಾಮಿನ ತಬ್ಲೀಗನ್ನು ಪ್ರಪಂಚದ ಮೂಲೆ ಮೂಲೆಗೆ ತಲುಪಿಸುತ್ತೇವೆ ಎಂದು ಹೇಳಿಕೊಂಡು ಬೈಅತ್ ಮಾಡಿರುವಾಗ ನಾವು ಸಹಾಬಿಯರ ಗುಣಗಳನ್ನು ನಮ್ಮೊಳಗೆ ಉಂಟುಮಾಡಬೇಕಾಗುವುದು.

"ನಮ್ಮ ಪರಿಪೂರ್ಣ ಮಾರ್ಗದರ್ಶಕರಾದ ಪೈಗಂಬರ್(ಸ)ರ ಸಹಾಬಿಯರು ತಮ್ಮ ದೇವನಿಗಾಗಿ ಮತ್ತು ರಸೂಲ್‌ಗಾಗಿ ಎಂತೆಂತಹ ತ್ಯಾಗಗಳನ್ನು ಮಾಡಿದ್ದಾರೆ. ಅವರನ್ನು ಅಂತಹ ತ್ಯಾಗಿಗಳನ್ನಾಗಿ ಮಾಡಿದ ಸಂಗತಿ ಏನಾಗಿತ್ತು? ಅದು ಅವರ ಹೃದಯದಲ್ಲಿ ಪ್ರಭಾವ ಬೀರಿದ್ದ ಸತ್ಯವಾದ ದೈವಿಕ ಪ್ರೀತಿಯ ಉತ್ಸಾಹವಾಗಿತ್ತು. ಯಾವುದೇ ಪ್ರವಾದಿಯೊಂದಿಗೆ ಹೋಲಿಕೆ ಮಾಡಿದರೂ, ಅವರ ಉದಾಹರಣೆ ಎಲ್ಲಿಯೂ ಸಿಗಲಾರದು. ಈ ಸ್ಥಾನವು ಹಝ್ರತ್ ಪೈಗಂಬರ್(ಸ)ರ ಸಹಾಬಿಯರದ್ದಾಗಿತ್ತು. ಅವರ ನಡುವೆ ಇದ್ದ ಪ್ರೀತಿ ಮತ್ತು ಅನುರಾಗ ಎಂತಹದು ಎಂದರೆ ಚಿನ್ನದ ಪರ್ವತವನ್ನು ನೀಡಿದರೂ ಖಂಡಿತವಾಗಿಯೂ ಅಂತಹ ಪ್ರೀತಿ

ಉಂಟಾಗುತ್ತಿರಲಿಲ್ಲ. ಅದು ಅಲ್ಲಾಹನು ಉಂಟುಮಾಡಿದ ಪ್ರೀತಿಯಾಗಿತ್ತು. ಏಕೆಂದರೆ ಅವರಲ್ಲಿ ನಿಷ್ಠೆ ಇತ್ತು.

ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಕೇಳುತ್ತಿದ್ದಾರೆ: ನೀವು ಹಾಗೆ ಇದ್ದೀರಾ? ಸಹಾಬಿಯರು ತಮ್ಮ ಜೀವ ಮತ್ತು ಸಂಪತ್ತನ್ನು ದೇವನ ಮಾರ್ಗದಲ್ಲಿ ನೀಡಿದರು.

(ಹುಝೂರ್ ಹೇಳಿದರು:) ಈಗ ನಮಗಾದರೋ ಅಂತಹ ಕಠಿಣತೆ ಇಲ್ಲ. ನಮಗೆ ಯುದ್ಧಗಳನ್ನು ಮಾಡಬೇಕಾಗಿಲ್ಲ. ನಮಗೆ ತ್ಯಾಗ ಮಾಡಲು ಸ್ವಲ್ಪ ಅವಕಾಶವನ್ನು ನೀಡಲಾಗಿದೆ. ಅದರಲ್ಲಿ ಜೀವ, ಸಂಪತ್ತು ಮತ್ತು ಸಮಯವನ್ನು ತ್ಯಾಗ ಮಾಡಲು ನಾವು ಮಾಡಿದ ಪ್ರತಿಜ್ಞೆಯನ್ನು ಪಾಲಿಸಲು ನಾವು ಸಿದ್ಧರಾಗಿರಬೇಕು. (ಹಝ್ರತ್ ಮಸೀಹ್ ಮೌಊದ್(ಅ) ಜಮಾಅತಿಗೆ ನೀಡಿದ ಕೆಲವು ಜ್ಞಾನಪೂರ್ಣ ಉಪದೇಶಗಳನ್ನು ಹುಝೂರ್ ಉಲ್ಲೇಖಿಸಿದರು.)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೀವು ಪವಿತ್ರ ಖುರ್‌ಆನನ್ನು ಓದಿರಿ, ಆದರೆ ಕಥೆಗಳಂತೆ ಅಲ್ಲ. ಜನರು ಎಷ್ಟು ಮಧುರವಾಗಿ ಖುರ್‌ಆನ್ ಓದುತ್ತಾರೆ. ಆದರೆ ಅದು ಗಂಟಲಿನ ಕೆಳಗೆ ಇಳಿಯುವುದಿಲ್ಲ. ಧಿಕ್ರ್ ಎಂಬ ಹೆಸರನ್ನು ಸಹ ಹೊಂದಿರುವ ಪವಿತ್ರ ಖುರ್‌ಆನ್ ಮನುಷ್ಯನೊಳಗೆ ಅಡಗಿರುವ ಮತ್ತು ಮರೆತುಹೋದ ಸತ್ಯಗಳನ್ನು ನೆನಪಿಸಲು ಬಂದಿದೆ. ಪವಿತ್ರ ಖುರ್‌ಆನ್ ಈ ಕಾಲದಲ್ಲಿಯೂ ಧಿಕ್ರ್ ಆಗಿದೆ. ಅದನ್ನು ಕಲಿಸಲು ಆಕಾಶದಿಂದ ಒಬ್ಬ ಶಿಕ್ಷಕ ಬಂದಿದ್ದಾನೆ. **ವ ಆಖರೀನ ಮಿನ್‌ಹುಮ್** ಎಂಬ ಪವಿತ್ರ ಖುರ್‌ಆನಿನ ಭವಿಷ್ಯವಾಣಿಯ ಈಡೇರಿಕೆ ಇಂದು ಈಡೇರಿದೆ. ನಮ್ಮ ವಿರೋಧಿಗಳು ಕೇವಲ ನಮ್ಮನ್ನು ಮಾತ್ರವಲ್ಲ, ಅಲ್ಲಾಹನ ವಾಗ್ದಾನಗಳಿಗೂ ಬೆಲೆಕೊಡುವುದಿಲ್ಲ. ಇವರ ಗಂಟಲಿನ ಕೆಳಗೆ ಖುರ್‌ಆನ್ ಇಳಿಯುವುದಿಲ್ಲ. ಅವರು ಬೋಧಕನ ಉಪದೇಶವನ್ನು ಸಹ ಕೇಳುವುದಿಲ್ಲ. ತಾಳ್ಮೆ ಮತ್ತು ಸದ್ಭಾವನೆಯಿಂದ ವರ್ತಿಸಲು ಅಲ್ಲಾಹನು ಹೇಳುತ್ತಾನೆ. ಆದರೆ ಇವರು ಕೇವಲ ವಿರೋಧಿಸುತ್ತಾರೆ. ಇಂದು ಇಸ್ಲಾಮನ್ನು ಹೊರತುಪಡಿಸಿ, ಜನರಿಗೆ ಜೀವನವನ್ನು ನೀಡುವ ಯಾವುದೇ ಧರ್ಮವಿಲ್ಲ. ನಾವು ಕಂಡರೂ ಮನವರಿಕೆ ಮಾಡಿದರೂ ಇಲ್ಲದಿದ್ದರೂ ಈ ಕಾರ್ಯವನ್ನು ಮಾಡಲಿಕ್ಕಾಗಿ ಅಲ್ಲಾಹನು ಅನೇಕ ಮಾರ್ಗಗಳನ್ನು ಕೈಗೊಳ್ಳುತ್ತಾನೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಿಂದಿನ ಕಾಲದಲ್ಲಿ ಅಲ್ಲಾಹನು ಹಝ್ರತ್ ಮುಹಮ್ಮದ್(ಸ)ರನ್ನು ಕಳುಹಿಸಿ ಪ್ರಕಾಶವನ್ನು ಇಳಿಸಿದಂತೆ, ಈ ಕಾಲದಲ್ಲಿ ಅಲ್ಲಾಹನು ನನ್ನನ್ನು ಕಳುಹಿಸಿದ್ದಾನೆ. ನಾನು ದೇವನ ಕಡೆಯಿಂದ ಬಂದಿದ್ದೇನೆ. ನೀವು ನನ್ನನ್ನು ನಂಬಬಹುದು, ಇಲ್ಲದಿದ್ದರೆ ನಂಬದೇ ಇರಬಹುದು. ಕೊನೆಯ ಕಾಲದಲ್ಲಿ ಮಸೀಹ್ ಮೌಊದ್‌ರ ಕೈಯಿಂದ ಇಸ್ಲಾಮಿನ ಪುನರುತ್ಥಾನವಾಗಬೇಕೆಂದು ಅಲ್ಲಾಹನು ಬಯಸಿದ್ದಾನೆ. ಅದಕ್ಕಾಗಿಯೇ ಆಗಮಿಸುವ ಮಹ್‌ದಿಗೆ "ಶಿಲುಬೆಯನ್ನು ಮುರಿಯುವವ" ಎಂಬ ಬಿರುದು ನೀಡಲಾಯಿತು. (ಹುಝೂರ್ ಹೇಳಿದರು:) ಹಝ್ರತ್ ಮಸೀಹ್ ಮೌಊದ್(ಅ)ರನ್ನು ಅಲ್ಲಾಹನು ನಿಯೋಗಿಸಿದಾಗ, ಹಿಂದೆಂದೂ ಕಂಡುಬರದಷ್ಟು ಶಕ್ತವಾಗಿ ಕ್ರೈಸ್ತರ ಫಿತ್ನ (ಪಿತೂರಿ) ಇತ್ತು. ಆದ್ದರಿಂದ, ಆ ಫಿತ್ನದ ಸಮಯದಲ್ಲಿ, ಅಲ್ಲಾಹನು ಶಿಲುಬೆಯನ್ನು ಮುರಿಯುವವನನ್ನು ಕಳುಹಿಸುವುದು ಅವನ ಅಭಿಮಾನಕ್ಕೆ ಅಗತ್ಯವಾದ ಸಂಗತಿಯಲ್ಲವೇ? ಅದಕ್ಕಾಗಿಯೇ ಅವನು ಮಸೀಹ್ ಮೌಊದ್‌ರನ್ನು ಕಳುಹಿಸಿದನು. ಮಸೀಹ್ ಮೌಊದ್‌ರ ಕಾರ್ಯವನ್ನು ಮುಂದುವರಿಸುವುದು ಹಾಗೂ ಹಝ್ರತ್ ಪೈಗಂಬರ್(ಸ)ರ, ಇಸ್ಲಾಮಿನ ಮತ್ತು ಖುರ್‌ಆನಿನ ಮೇಲೆ ಆಕ್ಷೇಪ ಮಾಡುವವರಿಗೆ ಸಮರ್ಥನೀಯ ಉತ್ತರಗಳನ್ನು ನೀಡುತ್ತಾ ಈ ಫಿತ್ನದ ತಲೆಯನ್ನು ಕಡಿಯುವುದು ಇಂದು ಈ ಜಮಾಅತಿನ ಕೆಲಸವಾಗಿದೆ. ಮಸೀಹ್ ಮೌಊದ್‌ರ ಸತ್ಯವು ಜಗತ್ತಿನಲ್ಲಿ ಹರಡಬೇಕು ಎಂಬುದು ಅಲ್ಲಾಹನ ವಾಗ್ದಾನವಾಗಿದೆ. ಅದು ಹರಡುತ್ತಿದೆ. ಅದನ್ನು ತನ್ನವರು ಅಥವಾ ಅನ್ಯರು ವಿರೋಧಿಸಿದರೂ ಅದರಿಂದ ಯಾವುದೇ ಪರಿಣಾಮ ಉಂಟಾಗದು.

ನಾವು ಇಸ್ಲಾಮಿನ ಎಲ್ಲ ಸ್ತಂಭಗಳನ್ನು ಪಾಲಿಸುತ್ತಿರುವಾಗ ಮಸೀಹ್ ಮೌಊದರ ಆವಶ್ಯಕತೆಯೇನು ಎಂದು ಜನರು ಕೇಳುತ್ತಾರೆ. ಇದಕ್ಕೆ ಹಝ್ರತ್ ಮಸೀಹ್ ಮೌಊದ್(ಅ) ಸ್ವತಃ ಹೀಗೆ ಉತ್ತರಿಸಿದ್ದಾರೆ: ನಿಮ್ಮ ಸ್ವಂತ ಸ್ಥಿತಿಯೇ ಅದಕ್ಕಿರುವ ಉತ್ತರವಾಗಿದೆ. ನೀವು ಹೇಳುತ್ತಿರುವಂತಹ ಸತ್ಕಾರ್ಯಗಳು ಒಳ್ಳೆಯ ಪರಿಣಾಮಗಳನ್ನು ಏಕೆ ಉಂಟುಮಾಡುತ್ತಿಲ್ಲ? ಏಕೆಂದರೆ, ಆ ಎಲ್ಲ ಕಾರ್ಯಗಳು ಸತ್ಕಾರ್ಯಗಳ ರೂಪದಲ್ಲಿಲ್ಲ. ಬದಲಿಗೆ ತಿರುಳಿಲ್ಲದ ಒಂದು ಸಿಪ್ಪೆಯಂತೆ ಇದೆ. ನಾವು ಅವನತಿಯಲ್ಲಿದ್ದೇವೆ ಮತ್ತು ನಮಗೆ ಸಹಾಯ ಮಾಡಲು ಒಬ್ಬ ಸುಧಾರಕ ಬರಬೇಕು ಎಂದು ಮುಸ್ಲಿಮರು ಇಂದು ಸ್ವತಃ ಒಪ್ಪಿಕೊಳ್ಳುತ್ತಾರೆ. ನಮ್ಮ ವಿರೋಧಿಗಳು ಕೂಡ ಒಂದು ರೀತಿಯಲ್ಲಿ ನಮ್ಮ ಸೇವಕರಾಗಿದ್ದಾರೆ. ಏಕೆಂದರೆ ಅವರು ವಿರೋಧದ ಮೂಲಕವಾದರೂ ನಮ್ಮ ಸಂದೇಶವನ್ನು ಪ್ರಪಂಚದಾದ್ಯಂತ ಹರಡುತ್ತಿದ್ದಾರೆ. ನಾನು ವ್ಯಾಪಾರವನ್ನು ಮಾಡುತ್ತಿದ್ದೇನೆ ಎಂದು ಅವರು ಹೇಳುತ್ತಾರೆ, ಅದನ್ನು ಸರಿಯೆಂದು ಹೇಳುವುದಾದರೆ ಹೌದು, ನಮ್ಮ ಕೆಲಸವು ಜಗತ್ತಿನ ದೃಷ್ಟಿಯಲ್ಲಿ ಯಾವುದೇ ಬೆಲೆಯಿಲ್ಲದ್ದು ಆಗಿದೆ. ನಮ್ಮ ಕೆಲಸವು ಧರ್ಮವನ್ನು ನವೀನಾಚಾರಗಳಿಂದ ರಕ್ಷಿಸುವುದು ಆಗಿದೆ. ಇಸ್ಲಾಂ ಸೇರಿದಂತೆ ಇತರ ಧರ್ಮಗಳ ನಿಜ ಸ್ಥಿತಿಯನ್ನು ಬಹಿರಂಗಪಡಿಸುವುದು ಆಗಿದೆ.

ಪವಿತ್ರ ಖುರ್‌ಆನ್ ಮತ್ತು ರಸೂಲುಲ್ಲಾಹ್(ಸ)ರನ್ನು ಅಲ್ಲಾಹನು ಕರುಣೆಯಾಗಿ ಕಳುಹಿಸಿದನು. ರಮಝಾನ್ ದಿನಗಳಲ್ಲಿ ಪವಿತ್ರ ಖುರ್‌ಆನ್ ಓದುವುದು, ಅರ್ಥಮಾಡಿಕೊಳ್ಳುವುದು, ಇಸ್ಲಾಮಿನ ಬೋಧನೆಗಳನ್ನು ಅಳವಡಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಅದನ್ನು ಲೋಕದಲ್ಲಿ ಹರಡುವ ಮೂಲಕ ಮಸೀಹ್ ಮೌಊದ್‌ರ ಧ್ಯೇಯವನ್ನು ಮುಂದುವರಿಸಲು ನಾವು ಪ್ರಯತ್ನಿಸಬೇಕು.

ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು: ನಾನು ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡಬೇಕೆಂದು ಮನವಿ ಮಾಡಲು ಬಯಸುತ್ತೇನೆ. ಅಲ್ಲಾಹನು ಅವರ ಸ್ಥಿತಿಗಳನ್ನು ಸುಧಾರಿಸಲಿ. ಇತ್ತೀಚಿಗೆ ವಿರೋಧಿಗಳು ತಮ್ಮ ಎಲ್ಲ ಶಕ್ತಿಯನ್ನು ಬಳಸುತ್ತಿದ್ದಾರೆ. ಎಲ್ಲ ವಿಧಗಳ ಕಷ್ಟಗಳನ್ನು ನೀಡಲು ಪ್ರಯತ್ನಿಸುತ್ತಿದ್ದಾರೆ. ಅವರಿಗೆ ಸಿಗುವ ಯಾವುದೇ ನೆಪವನ್ನು ಬಳಸಿಕೊಂಡು ಅಹ್ಮದಿಯರಿಗೆ ಹಾನಿ ಮಾಡುವುದು ಅವರ ಉದ್ದೇಶವಾಗಿದೆ. ಅಲ್ಲಾಹನು ಅಲ್ಲಿನ ಅಹ್ಮದಿಯರನ್ನು ರಕ್ಷಿಸಲಿ. ಮುಸ್ಲಿಂ ಸಮುದಾಯಕ್ಕಾಗಿ ಸಹ ದುಆ ಮಾಡಿರಿ, ಅಲ್ಲಾಹನು ಅವರಿಗೆ ಬುದ್ಧಿ ಮತ್ತು ತಿಳುವಳಿಕೆಯನ್ನು ನೀಡಲಿ ಮತ್ತು ಅವರ ಪರಿಸ್ಥಿತಿಗಳನ್ನು ಸುಧಾರಿಸಲಿ, ಅವರ ಮೇಲೆ ಕರುಣೆ ತೋರಿಸಲಿ. ಮಧ್ಯಪ್ರಾಚ್ಯದ ಮುಸ್ಲಿಮರ ಮೇಲೆ ದಬ್ಬಾಳಿಕೆಯ ಮತ್ತೊಂದು ಅಧ್ಯಾಯ ಪುನಃ ಪ್ರಾರಂಭವಾಗಿದೆ. ಅಲ್ಲಾಹನು ಅವರನ್ನು ಈ ದೌರ್ಜನ್ಯಗಳಿಂದ ರಕ್ಷಿಸಲಿ. ಅವರ ಮೇಲೆ ಕರುಣೆದೋರಲಿ – ಆಮೀನ್.

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُبِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوااللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis*** *(atba)*
At, ***'Masjid Mubarak',*** *Islamabad, Tilford,* U.K. On 21-03-2025
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim | ***Layout****:* Basheer K.P. Manjeshwar
***Published By****:* Kannada Isha'at Team for Nazarath Nashr-O-Isha'ath, Qadian
***Email***: *khutuba.kannada@gmail.com*
**You can find all the Sermons archived at**: www.alislam.org/friday-sermon